**ಎಲ್ ಎ ಸಿ ನಂಃ 42/2015**
**ಆರ್ ಡಬ್ಲ್ಯೂ ಃ 1**

**ದಿಃ 26.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ. ಎಸ್ ವಿ ವಕೀಲರಿಂದಃ-**

ತಿಮ್ಮಸಂದ್ರ ಗ್ರಾಮದ ಸರ್ವೆ ನಂ. 68/2 ರಲ್ಲಿ ಒಟ್ಟು ವಿಸ್ತೀರ್ಣ 9 ಗುಂಟೆ ಖರಾಬು 3 ಎಕರೆ 33 ಗುಂಟೆ ಹೈನು ಜಮೀನು ಇದೆ ಎಂದರೆ ಸರಿ. ತಾವು ಸರ್ವೆ ನಂ. 68/2 ರಲ್ಲಿ 3 ಎಕರೆ 12 ಗುಂಟೆ ಜಮೀನಿನಲ್ಲಿ ಮಾತ್ರ ಸ್ವಾಧೀನಾನುಭವದಲ್ಲಿದ್ದೀರಿ ಎಂದರೆ ಸರಿ. ಅದರಂತೆ ಪಹಣಿ ಪತ್ರಿಕೆಯಲ್ಲಿ ದಾಖಲಾಗಿದೆ ಎಂದರೆ ಸರಿ. ಸದರಿ ಸರ್ವೆ ನಂ. ಉಳಿಕೆ 21 ಗುಂಟೆ ಜಮೀನು 2 ನೇ ಎದುರುದಾರರ ಹೆಸರಿನಲ್ಲಿದೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ 352/2014 ರಲ್ಲಿ ತಮಗೆ ಸರ್ವೆ ನಂ. 68/2 ರಲ್ಲಿ 3 ಎಕರೆ 12 ಗುಂಟೆ ಗಿಂತ ಹೆಚ್ಚಿನ ಜಮೀನು ತಮಗೆ ಬರಬೇಕೆಂದು ಹೇಳಿ ಬರೆಸಿಲ್ಲ ಎಂದರೆ ಸರಿ. ಸರ್ವೆ ನಂ. 68/2 ರಲ್ಲಿ 2 ನೇ ಎದುರುದಾರರಿಗೆ ಸೇರಿರುವ 21 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ತಮಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 68/2 ರಲ್ಲಿ 21 ಗುಂಟೆ ಜಮೀನು ತಮಗೆ ಸೇರಬೇಕೆಂದು ತಾವೇನಾದರೂ ದಾವೆಯನ್ನು ಹೂಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. 2 ನೇ ಎದುರುದಾರರಿಗೆ ಸೇರಿರುವ 21 ಗುಂಟೆ ಜಮೀನು ರಸ್ತೆ ಅಗಲೀಕರಣಕ್ಕಾಗಿ ಭೂ ಸ್ವಾಧೀನ ಆಗಿದ್ದು ಸದರಿ ಪರಿಹಾರ ಹಣವನ್ನು 2 ನೇ ಎದುರುದಾರರು ತೆಗೆದುಕೊಳ್ಳಬಾರದು ಎಂಬ ದುರುದ್ದೇಶದಿಂದ ಈ ಅರ್ಜಿಯಲ್ಲಿ ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**